Sree Durga Suladi

ಶ್ರೀದುರ್ಗಾ ಸುಳಾದಿ

ಧ್ರುವ ತಾಳ

ದುರ್ಗಾ ದುರ್ಗೆಯ ಮಹಾದುಷ್ಟಜನ ಸಂಹಾರೆ |

ದುರ್ಗಾಂತರ್ಗತ ದುರ್ಗೆ ದುರ್ಲಭೆ ಸುಲಭೆ |

ದುರ್ಗಮವಾಗಿದೆ ನಿನ್ನ ಮಹಿಮೆ ಭೊಮ್ಮ

ಭರ್ಗಾದಿಗಳಿಗೆಲ್ಲ ಗುಣಿಸಿದರೊ

ಸ್ವರ್ಗಭೂಮಿ ಪಾತಾಳ ಸಮಸ್ತ ವ್ಯಾಪುತ ದೆವಿ

ವರ್ಗಕ್ಕೆ ಮೀರಿದ ಬಲುಸುಂದರೀ

ದುರ್ಗಣದವರ ಬಾಧೆ ಬಹಳವಾಗಿದೆ ತಾಯಿ

ದುರ್ಗತಿಹಾರೆ ನಾನು ಪೆಳುವುದೇನು

ದುರ್ಗಂಧವಾಗಿದೆ ಸಂಸ್ಕೃತಿ ನೋಡಿದರೆ

ನಿರ್ಗಮ ನಾ ಕಾಣೆನಮ್ಮ ಮಂಗಳಾಂಗೆ

ದುರ್ಗೆ ಹೆ ದುರ್ಗೆ ಮಹಾದುರ್ಗೆ ಭೂದುರ್ಗೆ ವಿಷ್ಣು

ದುರ್ಗೆ ದುರ್ಜಯೆ ದುರ್ಧಕ್ಷೆ ಶಕ್ತಿ

ದುರ್ಗಕಾನನ ಗಹನ ಪರ್ವತ ಘೊರ ಸರ್ಪ

ಗರ್ಗರ ಶಬ್ಧ ವ್ಯಾಘ್ರ ಕರಡಿ ಮೃತ್ಯು

ವರ್ಗ ಭೂತ ಪ್ರೇತ ಪೈಶಾಚಿ ವೊದಲಾದ

ದುರ್ಗಣ ಸಂಕಟ ಪ್ರಾಪ್ತವಾಗೆ

ದುರ್ಗಾದುರ್ಗೆ ಎಂದು ಉಚ್ಚಸ್ವರದಿಂದ

ನಿರ್ಗಳಿತನಾಗಿ ಒಮ್ಮೆ ಕೂಗಿದರೂ

ಸ್ವರ್ಗಾಪವರ್ಗದಲ್ಲಿ ಹರಿಯೊಡನೆ ಇದ್ದರು

ಸುರ್ಗಣ ಜಯಜಯವೆಂದು ಪೊಗಳುತಿರೆ

ಕರ್ಗಳಿಂದಲಿ ಎತ್ತಿ ಸಾಕುವ ಸಾಕ್ಷಿ ಭೂತೆ

ನೀರ್ಗುಡಿದಂತೆ ಲೊಕ ಲೀಲೆ ನಿನಗೆ